ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/ 12 /ಎಸಿಎಂ(2)/2019-20

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:02-07-2019.

## -:: ಸುತ್ತೋಲೆ ::-

**ವಿಷಯ:** 2019-20ನೇ ಸಾಲಿನ ಶಿಕ್ಷಕರ ದಿನಾಚರಣೆ ಬಾವುಟಗಳ ಮಾರಾಟದಿಂದ ವಂತಿಗೆ ಸಂಗ್ರಹಿಸುವ ಬಗ್ಗೆ.

**ಉಲ್ಲೇಖ:** ಕಾರ್ಯದರ್ಶಿ/ಖಜಾಂಚಿಗಳ ಕಛೇರಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಬೆಂಗಳೂರು ಇವರ ಪತ್ರ ಸಂ. ಎಫ್5/ರಾ.ಶಿ.ಕ.ಪ್ರ/ವಿ.ಕ್ಷೇ.ನಿ/ಶಿ.ಕ.ನಿ/ಬಾವುಟಗಳ ಮುದ್ರಣ/01/2018-19, ದಿ:19-06-2019.

-00000000-

ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ವತಿಯಿಂದ ಪ್ರತಿ ವರ್ಷವೂ ಸೆಪ್ಟಂಬರ್ 5 ರಂದು "ಶಿಕ್ಷಕರ ದಿನಾಚರಣೆ" ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಹೊರತರುವ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರವುಳ್ಳ ಬಾವುಟಗಳನ್ನು ವಿದ್ಯಾರ್ಥಿ ಹಾಗೂ ಶಿಕ್ಷಕ ವರ್ಗದವರಿಗೆ ಮಾರಾಟ ಮಾಡಿ ಬರುವ ವಂತಿಗೆಯಿಂದ ವಿದ್ಯಾರ್ಥಿಗಳ ಹಾಗೂ ಶಿಕ್ಷಕ ವರ್ಗದವರಿಗೆ ಹಲವಾರು ಉಪಯುಕ್ತವಾದಂತಹ ಕಲ್ಯಾಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದಕ್ಕೆ ಪ್ರೋತ್ಸಾಹ ಮಾಡುವುದರ ಮೂಲಕ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ಘನತೆಯನ್ನು ಹೆಚ್ಚಿಸುವುದು ರಾಜ್ಯದಲ್ಲಿರುವ ಪ್ರತಿಯೊಬ್ಬ ಶಿಕ್ಷಕರ ಜವಾಬ್ದಾರಿಯಾಗಿದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು/ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು ಇವರ ಕಛೇರಿಯಿಂದ ಸರಬರಾಜು ಮಾಡಿರುವ ಶಿಕ್ಷಕರ ದಿನಾಚರಣೆ ಬಾವುಟಗಳನ್ನು (ನಿಮ್ಮ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ) ಕಡ್ಡಾಯವಾಗಿ ಮಾರಾಟ ಮಾಡಿ ವಂತಿಗೆ ಸಂಗ್ರಹಿಸುವುದು. ಹೀಗೆ ಸಂಗ್ರಹಿಸಿದ ವಂತಿಗೆಯನ್ನು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಬೆಂಗಳೂರು ಇವರ ಖಾತೆಗೆ ಜಮಾ ಮಾಡುವುದು ಯಾವುದೇ ಕಾರಣಕ್ಕೂ ಬಾವುಟಗಳನ್ನು ಮಾರಾಟ ಮಾಡದೆ ಹಿಂದಿರುಗಿಸಬಾರದೆಂದು ಈ ಮೂಲಕ ತಿಳಿಸಿದೆ.

ದಾಖಲಾತಿ ಸಮಯದಲ್ಲಿ ಕ.ರಾ.ವಿ.ಕ್ಷೇ.ನಿಧಿ (KSSWF) ₹ 25/- ಮತ್ತು ಕ.ರಾ.ಶಿ.ಕ.ನಿಧಿ (KSTBF) ₹ 25/- ರಂತೆ ಪ್ರತಿ ವಿದ್ಯಾರ್ಥಿಗಳಿಂದ ವಂತಿಗೆ ರೂಪದಲ್ಲಿ ಇತರೆ ಶುಲ್ಕಗಳೊಂದಿಗೆ ವಸೂಲಿ ಮಾಡುವುದು. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ (KSTBF), ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ (KSSWF) ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ (NFTW) ವಂತಿಗೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಚಲನ್ ಮೂಲಕ ರಾಜ್ಯದ ಯಾವುದೇ ಎಸ್.ಬಿ.ಎಂ ಬ್ಯಾಂಕಿನಲ್ಲಿ ಅಥವಾ ಬ್ಯಾಂಕ್ ಹುಂಡಿ ಮೂಲಕ ನಿಧಿಗಳ ಮೂರು ಖಾತೆಗಳಿಗೆ ಪ್ರತ್ಯೇಕವಾಗಿಯೇ ಹಣ ಜಮಾ ಮಾಡುವುದು. ಮೂರು ನಿಧಿಗಳ ವಿವರ ನೀಡಿ ಈ ಸಂಬಂಧ ಯಾವುದೇ ಸ್ಪಷ್ಟೀಕರಣವನ್ನು "ಕಾರ್ಯದರ್ಶಿ ಹಾಗೂ ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ

"ನಿಧಿಗಳ ಕಛೇರಿ, ಶಿಕ್ಷಕರ ಸದನ, ಕಾವೇರಿ ಭವನದ ಎದುರು, ಕೆಂಪೇಗೌಡ ರಸ್ತೆ, ಬೆಂಗಳೂರು – 560 002," ಇವರೊಂದಿಗೆ ನೇರ ಪತ್ರ ವ್ಯವಹಾರವನ್ನು ಮಾಡುವುದು. ಯಾವುದೇ ಸ್ಪಷ್ಟೀಕರಣವಿದ್ದಲ್ಲಿ ದೂರವಾಣಿ ಸಂಖ್ಯೆ: 080–22483434 ಮೂಲಕ ಸಂಪರ್ಕಿಸಬಹುದು.

ದೂರವಾಣಿ ಸಂಖ್ಯೆ: 080–22483434, ಫ್ಯಾಕ್ಸ್ ಸಂಖ್ಯೆ: 080–22483860, E-Mail ID: kstbf63@gmail.com

ನಿರ್ದೇಶಕರು

**ಇವರಿಗೆ:**

*ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು / ಪಾಲಿಟೆಕ್ನಿಕ್ / ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.*

**ಪ್ರತಿ ಮಾಹಿತಿಗಾಗಿ:–**

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ.
4. ನಿರ್ದೇಶಕರ ಆಪ್ತಶಾಖೆಗೆ
5. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6. ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಸದರಿ ಪ್ರವೇಶಾಧಿಸೂಚನೆಯನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.